

ಮೇಳದ ಸಂದರ್ಭದಲ್ಲಿ ದೇವಿ ಭಕ್ತರ ಮೆರವಣಿಗೆ

# ಪೂರ್ವೋತ್ತರದ ಕುಂಭಮೇಳ ಇದು, ಅಂಬೂಬಾಚಿ ಮೇಳ

ಅಸ್ಸಾಂನ ಕಾಮಾಖ್ಯ ಮಂದಿರ ದೇಶದ ಪ್ರಮುಖ ಶಕ್ತಿಪೀಠಗಳಲ್ಲೊಂದು. ಕಾಮಾಖ್ಯ ದೇವಿ ಋತುಮತಿಯಾಗುವ ಸಂದರ್ಭದ 'ಅಂಬುಬಾಚಿ ಮೇಳ' ಕಾಮಾಖ್ಯದತ್ತ ಭಕ್ತಸಾಗರವನ್ನೇ ಸೆಳೆಯುತ್ತದೆ. ಜೂನ್ 22ರಿಂದ ನಡೆಯಲಿರುವ ಈ ವರ್ಷದ ಮೇಳದ ಸಂಭ್ರಮ ಈಗಾಗಲೇ ಕಾಮಾಖ್ಯದಲ್ಲಿ ಆರಂಭವಾಗಿದೆ.

■ ಶ್ರೀನಿವಾಸ ಜೋಕಟ್ಟೆ

ಭಾರತದ ಪ್ರಮುಖ ಶಕ್ತಿಪೀಠಗಳ ಸಾಲಿನಲ್ಲಿ ಅಸ್ಸಾಂನ ಗುವಾಹಟಿಯಲ್ಲಿರುವ ಕಾಮಾಖ್ಯ ದೇವಸ್ಥಾನ ಮಕುಟಪ್ರಾಯವಾದುದು. 'ಪೂರ್ವೋತ್ತರ ಭಾರತದ ಪ್ರವೇಶದ್ವಾರ' ಎನ್ನಲಾಗುವ ಬ್ರಹ್ಮಪುತ್ರ ನದಿ ತೀರದಲ್ಲಿರುವ, ಗುವಾಹಟಿ ಶಹರದಿಂದ 8 ಕಿ.ಮೀ. ದೂರದ ನೀಲಾಚಲ ಬೆಟ್ಟದಲ್ಲಿರುವ 'ಕಾಮಾಖ್ಯ ಶಕ್ತಿಪೀಠ' ಎಂಬ ದೇವಿಮಂದಿರವು ಇತರ ಶಕ್ತಿಪೀಠಗಳಿಗಿಂತ ಸ್ವಲ್ಪ ವಿಶೇಷವಾಗಿದೆ. ಈ ಸ್ಥಳವು ತಂತ್ರಮಂತ್ರ ಸಾಧನೆಗೆ ಹೆಸರಾದುದು. ಇಲ್ಲಿ ಪ್ರತಿ ವರ್ಷ ಆಷಾಢ ಮಾಸದಲ್ಲಿ 'ಅಂಬುಬಾಚಿ ಮೇಳ'ವನ್ನು ಆಯೋಜಿಸಲಾಗುತ್ತದೆ.

'ಅಂಬುಬಾಚಿ ಮೇಳ' – 'ಅಂಬುಬಾಚೀ ಪರ್ವ' ಅಂದರೆ ಅದು ಅಸ್ಸಾಂನ ಪ್ರಮುಖ ಉತ್ಸವ. ಈ ವರ್ಷದ ಮೇಳದಲ್ಲಿ ಭಾಗವಹಿಸಲು ಈಗಾಗಲೇ ಸಾಧು–ಸಂತ, ಅಘೋರಿಗಳೆಲ್ಲ ಕಾಮಾಖ್ಯ ದೇವಸ್ಥಾನದತ್ತ ಪಯಣ ಬೆಳೆಸಿದ್ದಾರೆ.

**ಕಾಮಾಖ್ಯಾದೇವಿ ಋತುಮತಿಯಾಗುವ ಸಂದರ್ಭದ ಆಚರಣೆ-ಆರಾಧನೆ**

ಈ ಜಾತ್ರೆಯಲ್ಲಿ ತಾಂತ್ರಿಕ ಸಾಧಕರ ಶಕ್ತಿಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗುತ್ತದೆ. ನೂರಾರು ತಾಂತ್ರಿಕರು ತಮ್ಮ ಏಕಾಂತದಿಂದ ಹೊರಬಂದು ತಮ್ಮ ಶಕ್ತಿಯನ್ನು ಭಕ್ತರ ಮುಂದೆ ಪ್ರದರ್ಶಿಸುತ್ತಾರೆ.

ಈ ವರ್ಷದ ಮೇಳದ ಜೂನ್ 22ರಿಂದ 26ರವರೆಗೆ ನಡೆಯಲಿದೆ. ಈ ಅವಧಿಯಲ್ಲಿ ಕಾಮಾಖ್ಯ ದೇವಿಯು ಋತುಮತಿಯಾಗಿರುತ್ತಾಳೆ ಎಂದು ನಂಬಲಾಗುತ್ತದೆ. ಆ ಸಂದರ್ಭದಲ್ಲಿ ದೇವಸ್ಥಾನದ ಬಾಗಿಲುಗಳನ್ನು ಮೂರು ದಿನಗಳವರೆಗೆ ಮುಚ್ಚಲಾಗುತ್ತದೆ. ನಾಲ್ಕನೇ ದಿನ ವಿಶೇಷ ಪೂಜೆಯೊಂದಿಗೆ ದೇವಸ್ಥಾನದ ಬಾಗಿಲು ತೆರೆಯಲಾಗುತ್ತದೆ.

ಭಕ್ತರ ಆರಾಧ್ಯಮಾತೆ ಕಾಮಾಖ್ಯ ದೇವಿ ರಜಸ್ವಲೆ ಆಗುವ ಜೂನ್ ತಿಂಗಳು ಹತ್ತಿರ ಬರುತ್ತಿರುವ ಹಿನ್ನೆಲೆಯಲ್ಲಿ ಗುವಾಹಟಿಯಲ್ಲಿ ಭಕ್ತರ ನೂಕುನುಗ್ಗಲು ಈಗಾಗಲೇ ಆರಂಭವಾಗಿದೆ. ಜೂನ್ ತಿಂಗಳ ಮೂರನೇ ವಾರದಲ್ಲಂತೂ ನಾಗಾ ಸಾಧು ಸಂತರಿಂದ ಮೊದಲುಗೊಂಡು ತೀರ್ಥಯಾತ್ರಿಗಳು ಪ್ರವಾಸಿಗರಿಂದ ಈ ಪರಿಸರ ಕಿಕ್ಕಿರಿದು ತುಂಬಿರುತ್ತದೆ. ಭಕ್ತರು ಭಜನೆ–ಕೀರ್ತನೆಗಳಲ್ಲಿ ಮುಳುಗಿರುವ ದೃಶ್ಯಗಳನ್ನು ನೋಡುವುದೊಂದು ವಿಶೇಷ ಅನುಭವ. 'ಪೂರ್ವೋತ್ತರದ ಕುಂಭಮೇಳ' ಅಂತಲೂ 'ಅಂಬುಬಾಚೀ ಪರ್ವ'ವನ್ನು ಕರೆಯುವುದಿದೆ.